ಬದುಕಬೇಕೆಂದು ವಿಚಾರ.

ಅಂತೆಯೇ ಮಾವೇಲ್ಲಿಕರಾ ತಲುಪಿದಾಗ ಅವನು ಮೊದಲು ಪ್ರಕಾರ ಕೊಟ್ಟಿದ್ದು ತನ್ನ ಕೋಣೆಯ ಬಗ್ಗೆ. ಅವನು ತಂದಿದ್ದ ಅರ್ಧ ಪೂರೈಸಿದ ವರ್ಣಚಿತ್ರಗಳನ್ನು ಹರಡಿಕೊಳ್ಳಲು ಜಾಗ ಸಾಲದೆಂದೂ, ಕೋಣೆಗೆ ಗಾಳಿಬೆಳಕು ಕಡಿಮೆಯೆಂಬುದು ಅವನ ಅಹವಾಲು.

'ನೀನೇಕೆ ಚಿತ್ರಿಸಬೇಕು? ಎರಡು ಹೊತ್ತು ಉಣ್ಣಲು ಹಣವಿದೆ. ಉಡುಗೆಗಳಿಗೇನೂ ಕಡಿಮೆಯಿಲ್ಲ. ಮತ್ತೇಕೆ ಈ ಚಿತ್ರ ರಚಿಸುವ ಉಸಾಬರಿ? ಆರಾಮವಾಗಿ ಇರಬಾರದೆ?' ನನ್ನ ಮಾತನ್ನು ಕೇಳಿ ರವಿವರ್ಮ ಬೆಚ್ಚಿಬಿದ್ದ.

'ಏನು ಹೇಳುತ್ತಿದ್ದಿ ಪುರು? ಕಲೆ ನನ್ನ ಜೀವ, ನನ್ನ ಸರ್ವಸ್ವ. ಅದನ್ನೆಂತು ಬಿಡಲಿ?' ಕೊನೆಗೆ ನಾನೇ ಸೋತು ಅವನಿಗಾಗಿ ಅರಮನೆಯ ಹಿಂಭಾಗದ ವಿಶಾಲವಾದ ಕೊಠಡಿಯನ್ನು ಅಣಿ ಮಾಡಿಸಿಕೊಟ್ಟೆ. ಸಜ್ಜುಗೊಳಿಸಲು ಬಂದ ಸಖಿಯರು 'ಈ ಮಹಾರಾಜರಿಗೇಕೆ ಈ ಹುಚ್ಚು. ಹೆಂಡತಿಗೆ ವರ್ಷಕ್ಕೆರಡು ಸೀರೆ ಕೊಡಿಸುವುದಷ್ಟೇ ಅವರ ಕೆಲಸ. ಮಿಕ್ಕಂತೆ ಈ ಚಿತ್ರ ರಚಿಸಿ ಏನು ಸಂಪಾದಿಸಲು ಸಾಧ್ಯ?' ಎನ್ನುತ್ತಿದ್ದುದು ಕಿವಿಗೆ ಬಿದ್ದಾಗ ಮೈ ಉರಿಯುತ್ತಿತ್ತು.

ಒಂದು ದಿನ ರವಿವರ್ಮ ನನ್ನೊಂದಿಗಿದ್ದಾಗ ಕೇಳಿದ 'ನನ್ನದೊಂದು ಕೋರಿಕೆ ನೆರವೇರಿಸುವೆಯಾ ಪುರು?'

'ಏನದು?'

'ನಾನು ನಿನ್ನನ್ನು ಚಿತ್ರಿಸಬೇಕಲ್ಲ?'

'ನಾನೇನೂ ಸುಂದರಿಯಲ್ಲವಲ್ಲ?'

'ಅದನ್ನು ನಿರ್ಧರಿಸಬೇಕಾದವನು ನಾನು.' ಕ್ಷಣ ಸುಮ್ಮನಿದ್ದು ಮುಖ ತಿರುಗಿಸಿ ಹೇಳಿದೆ. 'ಮರ್ಯಾದಸ್ಥ ಮನೆತನದ ಹೆಣ್ಮಕ್ಕಳು ಹೀಗೆಲ್ಲಾ ಮಾಡುವುದಿಲ್ಲ, ಮತ್ತೆ ಕೇಳಬೇಡಿ.'

ಹಿಂದಿನ ಕೊಠಡಿಗೆ ಹೋದ ಮೇಲೆ ರವಿವರ್ಮನ ಚರ್ಯೆ ಸ್ವಲ್ಪ ಬದಲಿಸಿತು. ಕ್ರಮೇಣ ಉತ್ಸಾಹ ತುಂಬಿಕೊಳ್ಳುತ್ತಿರುವಂತೆ ನನಗೆ ಭಾಸವಾಯಿತು. ಇಷ್ಟು ವರ್ಷಗಳು ಇಲ್ಲದ ಉತ್ಸಾಹ ಈಗೆಲ್ಲಿಂದ ಬಂತು? ಇದಕ್ಕೇನು ಕಾರಣ ಇರಬಹುದು ಎಂದು ಅರಿಯಲು ಒಮ್ಮೆ ಪ್ರಾತಃಕಾಲ ಅವನ ಕೊಠಡಿಗೆ ಹೋದೆ. ಮರದ ಚೌಕಟ್ಟಿನ ಮೇಲೆ ಇಡಲಾಗಿದ್ದ ವರ್ಣಚಿತ್ರದ ಪರದೆಯನ್ನು ಸರಿಸಿ ನೋಡಿದೆ, ಬೆಚ್ಚಿಬಿದ್ದೆ!

ಅನ್ಯಮನಸ್ಕನಾಗಿ, ಕಿಟಕಿಯಿಂದ ಹೊರಗಿದ್ದ ತೆಂಗಿನ ತೋಪನ್ನು ನೋಡುತ್ತಾ ನಿಂತಿದ್ದ ರವಿವರ್ಮನ ಬಳಿ ಹೋಗಿ ಕುಹಕ ಧ್ವನಿಯಲ್ಲಿ 'ಬಹಳ ಸಂತಸದಿಂದಿರುವಂತಿದೆ' ಎಂದೆ.

'ಅರೆ! ಇದೇನು ನೀನು ಈ ಹೊತ್ತಿನಲ್ಲಿ?' ಎಂದ ಅಚ್ಚರಿಯಿಂದ. 'ಏಕೆ? ಬೇರಾರನ್ನಾದರೂ ಎದುರು ನೋಡುತ್ತಿದ್ದೆಯೇ?' 'ಹಾಗೇನಿಲ್ಲ, ನೀನು ಈ ಸಮಯದಲ್ಲಿ ಅರಮನೆಯ ಮನೆವಾಳ್ತೆ, ಪೂಜೆಗಳಲ್ಲಿ ಇರುತ್ತೀಯಲ್ಲವೆ? ಅದಕ್ಕೆ ಕೇಳಿದೆ.' 'ನೀನು ರಚಿಸುತ್ತಿರುವ ಚಿತ್ರ ಕಾಮಿನಿಯದಲ್ಲವೆ?' 'ಹೌದು, ಇನ್ನೂ ಪೂರ್ತಿಯಾಗಿಲ್ಲ'. 'ಚಿತ್ರಕ್ಕೆ ರೂಪದರ್ಶಿಯಾಗಿ ಅವಳನ್ನು ಇಟ್ಟುಕೊಳ್ಳುವುದು, ನೀನವಳನ್ನು ಆಗಾಗ ಭೇಟಿಯಾಗಲು ನೆವ ಮಾತ್ರ. ಅವಳ ದೇಹ ಸೌಂದರ್ಯವನ್ನು ಹೀರುವ ಕೆಟ್ಟ ದೃಷ್ಟಿಯಿಂದ ತಾನೆ?'

'ಛೇ! ಎಂತಹ ಮಾತನಾಡುತ್ತಿದ್ದ ಪುರು? ಇದು ನಿನ್ನಲ್ಲಿ ಹರಿಯುತ್ತಿರುವ ರಾಜರಕ್ತಕ್ಕೆ ಸ್ವಲ್ಪವೂ ಹೊಂದುವುದಿಲ್ಲ. ಕಲೆಗೆ ನೀಡಬೇಕಾದ ಮರ್ಯಾದೆ ಕೊಟ್ಟು ಮಾತನಾಡು. ಅದನ್ನು ಕೊಚ್ಚೆಯಾಗಿಸಬೇಡ'

'ಕೊಚ್ಚೆ ಕೆಲಸ ಮಾಡುತ್ತಿರುವುದು ನೀನು, ಒಬ್ಬ ಮರ್ಯಾದಸ್ಥ ನಾಯರ್ ಸ್ತ್ರೀಯನ್ನು ಹೀಗೆ ರೂಪದರ್ಶಿಯಾಗಿ ನಿಲ್ಲಿಸಿಕೊಂಡು ಚಿತ್ರ ರಚಿಸುತ್ತಿರುವೆಯಲ್ಲಾ; ನಿನ್ನದೆಂತಹ ಘನಂದಾರಿ ಕೆಲಸ? ನನ್ನ ಅರಮನೆಯ ದಾಸಿಯನ್ನು ನನ್ನ ಅಪ್ಪಣೆಯಿಲ್ಲದೆ ನಿನ್ನ ಕೋಣೆಗೆ ಆಗಾಗ ಕರೆಯುವುದು ಯಾವ ನ್ಯಾಯ? ಇಂದೇ ಕಡೆ. ಕಾಮಿನಿಯನ್ನು ನೀನು ಇಲ್ಲಿಗೆ ಬರುವಂತೆ ಹೇಳಬಾರದು. ಅವಳನ್ನು ನೋಡಬಾರದು' ಕಟ್ಟಪ್ಪಣೆ ಮಾಡಿದೆ.

ರವಿವರ್ಮ ಮರುದಿನ ತನ್ನೆಲ್ಲಾ ವಸ್ತುಗಳನ್ನು ಕಟ್ಟಿಕೊಂಡು ಕಿಳಿಮಾನೂರಿಗೆ ಹೋಗಿಬಿಟ್ಟ. ಹೋಗುವಾಗ ನನ್ನ ಬಳಿ ಬಂದು 'ನಾನೇನೂ ಕೋಪದಿಂದ ಹೋಗುತ್ತಿಲ್ಲ. ಎಂದು ನಿನ್ನ ಪತಿ ಒಬ್ಬ ದೊಡ್ಡ ಚಿತ್ರಗಾರ ಎಂದು ನಿನಗೆ ಮರ್ಯಾದೆ ಬರುವುದೋ ಆ ದಿನ ನಿನ್ನಲ್ಲಿಗೆ ಮತ್ತೆ ಬರುತ್ತೇನೆ. ಕಲೆಗೆ, ಕಲಾವಿದನಿಗೆ ಕೊಡಬೇಕಾದ ಮರ್ಯಾದೆ ಇಲ್ಲದಿರುವ ಸ್ಥಳದಲ್ಲಿ ನನಗೆ ಇರಲು ಮನಸ್ಸಿಲ್ಲ. ಜೊತೆಗೆ ನನಗೆ ಈ ಪರಾವಲಂಬಿ ಜೀವನ ಸ್ವಲ್ಪವೂ ಹಿಡಿಸದು. ಹಾಗಾಗಿ ನಾನಿಲ್ಲಿ ಇರಲಾರೆ' ಎಂದು ಹೇಳಿ ಹೊರಟುಬಿಟ್ಟ.

ನಾನು ಮಾಡಿದ್ದರಲ್ಲಿ ತಪ್ಪೇನು ಎಂದು ನನಗೆ ತಿಳಿಯಲಿಲ್ಲ. ನಾನು ಸ್ವಾರ್ಥಿ ನಿಜ. ಎಲ್ಲಾ ಪತ್ನಿಯರಂತೆ ನನ್ನ ಪತಿ ನನ್ನವನು ಮಾತ್ರ ಆಗಿರಬೇಕೆಂಬ ಸ್ವಾರ್ಥವುಳ್ಳವಳು. ಅದರದು ತಪ್ಪಲ್ಲವಲ್ಲ? ನನಗಿಂತ ಸುಂದರಿಯಾದ ದಾಸಿಯೊಂದಿಗೆ ರವಿವರ್ಮ ಅಂತರಂಗಸಖನಾಗುವುದು ನನಗೆ ಈರ್ಷೆ ತಂದದ್ದು ನಿಜ. ಆದರೆ ಅದೂ ಸ್ತ್ರೀ ಸಹಜ ಸ್ವಭಾವವಲ್ಲವೆ?

**(ಸಶೇಷ)**


ರಾಜಾ ರವಿವರ್ಮ
ಚಿತ್ರಿಸಿದ ಸೈರಂಧ್ರಿ